ನಿಯಮ-330
ಕ್ರಮಸಂಖ್ಯೆ-103

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 359 ಯುಎನ್‌ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 31.12.2021.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು – 560 001.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ ಲಿಂಗಪ್ಪ ಇವರ ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ: ಕವಿಪ/ಪ್ರಶಾ/103/145ನೇಅ/ನಿ-330/2021, ದಿನಾಂಕ:17.12.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ ಲಿಂಗಪ್ಪ ಇವರ ನಿಯಮ 330ರಡಿ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

31/12/21

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಸಿ.ಎಂ. ಲಿಂಗಪ್ಪ ಇವರ ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ವಿಷಯ:**

ಕರ್ನಾಟಕ ರಾಜ್ಯದಲ್ಲಿ ಸುಮಾರು 250ಕ್ಕೂ ಹೆಚ್ಚು ಸಂಸ್ಕೃತ ಪಾಠಶಾಲೆಗಳು ಅಸ್ತಿತ್ವದಲ್ಲಿರುವುದು ಸರ್ಕಾರಕ್ಕೆ ತಿಳಿದಿರುವ ವಿಷಯವೇ ಆಗಿರುತ್ತದೆ. ಸಾಮಾನ್ಯವಾಗಿ ಬಹುತೇಕ ಸಂಸ್ಕೃತ ಪಾಠಶಾಲೆಗಳು ಅನುದಾನ ರಹಿತವಾಗಿ ಅನೇಕ ಮಠಗಳಿಂದ ನಡೆಸಲ್ಪಡುತ್ತವೆ ಹಾಗೂ ಹಣಕಾಸಿನ ಕೊರತೆಯಿಂದ ಇವುಗಳಿಗೆ ಸಮರ್ಪಕವಾದ ಪಿಠೋಪಕರಣಗಳ ಕೊರತೆಯಿರುತ್ತದೆ ಹಾಗೂ ಸಂಸ್ಕೃತ ಉಪಾಧ್ಯಾಯರಿಗೆ ಬೇರೆ ಸರ್ಕಾರಿ ಶಾಲೆಗಳ ಉಪಾಧ್ಯಾಯರಿಗೆ ನೀಡುವಷ್ಟು ವೇತನವೂ ಕೂಡ ದೊರಕುವುದಿಲ್ಲ. ಹೀಗಿರುವಾಗ 250 ಶಾಲೆಗಳ ಪೈಕಿ 50+2 ಶಾಲೆಗಳಿಗೆ ದಿನಾಂಕ:23.03.2020ರಂದು ಆದೇಶದ ಮೂಲಕ ಅನುದಾನಕ್ಕೆ ಒಳಪಡಿಸಲು ಆದೇಶವಾಗಿರುತ್ತದೆ. ಸುಮಾರು 200 ಶಾಲೆಗಳನ್ನು ಹೊರತುಪಡಿಸಿ ಕೇವಲ 50+2 ಶಾಲೆಗಳಿಗೆ ಮಾತ್ರ ಅನುದಾನಕ್ಕೆ ಒಳಪಡಿಸಿರುವುದು ತೀರ ಅನ್ಯಾಯವೇ ಅಲ್ಲದೇ ಪಕ್ಷಪಾತವೂ ಮತ್ತು ನ್ಯಾಯರಹಿತವಾದ ಕ್ರಮವಾಗಿರುತ್ತದೆ. 250 ಶಾಲೆಗಳ ಪೈಕಿ 50+2 ಶಾಲೆಗಳನ್ನು ಅನುದಾನಕ್ಕೆ ಆಯ್ಕೆ ಮಾಡಿಕೊಂಡಿರುವುದು ಯಾವ ನಿಯಮದ ಮೇರೆಗೆ ಎಂಬುದು ಕೂಡ ಸ್ಪಷ್ಟವಾಗಿರುವುದಿಲ್ಲ. ಈ ತೀರ್ಮಾನವೂ ಪಕ್ಷಪಾತಪೂರಿತವೂ, ನಿಯಮಪಾಲನೆ ಆಗದೇ ಇರುವ ಕ್ರಮವಾಗಿರುತ್ತದೆ.

ಆದ್ದರಿಂದ, ಮಾನ್ಯ ಉನ್ನತ ಶಿಕ್ಷಣ ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಈ 250 ಸಂಸ್ಕೃತ ಪಾಠಶಾಲೆಗಳನ್ನು ಅನುದಾನಕ್ಕೊಳಪಡಿಸಲು ಪಕ್ಷಪಾತರಹಿತವಾದ ನಿಯಮಾವಳಿಗಳನ್ನು ರಚಿಸಿ ಈಗಾಗಿರುವ ಪಕ್ಷಪಾತಪೂರಿತ ಅನ್ಯಾಯದ ಕ್ರಮವನ್ನು ಸರಿಪಡಿಸಲು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

**ಸರ್ಕಾರದ ಹೇಳಿಕೆ:**

52 ಸಂಸ್ಕೃತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಈವರೆಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುವುದಿಲ್ಲ.

ಖಾಸಗಿ ಸಂಸ್ಕೃತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಹೊಸದಾಗಿ ಮಾರ್ಗ ಸೂಚನೆಗಳನ್ನು ಹೊರಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ ಸಂದರ್ಭದಲ್ಲಿ ಖಾಸಗಿ ಸಂಸ್ಕೃತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರವಾಗಿ ಪರಿಗಣಿಸಲಾಗುವುದು.

(ಡಾ. ಅಶ್ವತ್ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ ಸಚಿವರು.